# ಗುರುದಕ್ಷಿಣೆಯ ಪರಿಚಾರಿಕೆ

ತಡರಾತ್ರಿ ಫೋನ್ ಬಂತೆಂದರೆ ಅದು ಕವಿ ಸುಮತೀಂದ್ರ ನಾಡಿಗರದು ಎನ್ನುವುದು ಸಾಹಿತ್ಯ ವಲಯದಲ್ಲಿ ಚಾಲ್ತಿಯಲ್ಲಿರುವ ನಂಬಿಕೆ. ದೂರವಾಣಿಯ ಇನ್ನೊಂದು ಬದಿಯಲ್ಲಿರುವವರು ಮಲಗುವ ಧಾವಂತದಲ್ಲಿದ್ದರೆ, ಈ ಕಡೆಯ ನಾಡಿಗರದು ಸಾವಧಾನದ ಮಾತು. ಅಂದಹಾಗೆ, ಕಲ್ಲು ಕರಗುವ ವೇಳೆಯಲ್ಲೂ ಸಾಹಿತ್ಯದ ಬಗ್ಗೆ ಮಾತನಾಡುವ ನಾಡಿಗರಿಗೆ ಕಾವ್ಯವೆನ್ನುವುದು ಜೀವದ್ರವ್ಯವೂ ಹೌದು, ವ್ಯಸನವೂ ಹೌದು! ಇಂತಿಪ್ಪ ನಾಡಿಗರಿಗೆ ಇದೀಗ ಕನ್ನಡ ಪುಸ್ತಕ ಪ್ರಾಧಿಕಾರ ನೀಡುವ ಜಿ.ಪಿ.ರಾಜರತ್ನಂ ಹೆಸರಿನ ಸಾಹಿತ್ಯ ಪರಿಚಾರಕ ಪ್ರಶಸ್ತಿ ದೊರೆತಿದೆ.

ಎಪ್ಪತ್ತೈದರ ನಾಡಿಗರನ್ನು ಪ್ರಶಸ್ತಿಯೊಂದರ ಮೂಲಕ ನೆನಪಿಸಿಕೊಳ್ಳುವುದು ಸಂತೋಷದ ಸಂಗತಿಯೇ. ಆದರೆ, ಹಿರಿಯ ಕವಿಯೊಬ್ಬರನ್ನು ಸಾಹಿತ್ಯ ಪರಿಚಾರಕ ಪ್ರಶಸ್ತಿಯ ಮೂಲಕ ನಾವು ನೆನಪಿಸಿಕೊಳ್ಳಬೇಕಿತ್ತೆ? (ಅವರಿಗೆ 'ಪಂಪ' ಪ್ರಶಸ್ತಿ ಬಂದಿದ್ದರೆ ಅದು ಬೇರೆಯ ಮಾತು). ಇಷ್ಟಕ್ಕೂ ನಾಡಿಗರ ಸಾಹಿತ್ಯ ಪರಿಚಾರಿಕೆಯಾದರೂ ಎಂಥದು?

ಬೆಂಗಳೂರಿನ ಕಾಲೇಜೊಂದು ರಾಜರತ್ನಂ ಬಗ್ಗೆ ವಿಚಾರ ಸಂಕಿರಣ ನಡೆಸಿದಾಗ, ಕೇಳಿದಷ್ಟು ಸಂಭಾವನೆ ಕೊಟ್ಟರಷ್ಟೇ ಕಾರ್ಯಕ್ರಮದಲ್ಲಿ ಮಾತನಾಡುವುದಾಗಿ ಹಟ ಹಿಡಿದದ್ದೇ? ನಮ್ಮೊಡನಿಲ್ಲದ ಗೋಪಾಲಕೃಷ್ಣ ಅಡಿಗ, ರಾಜರತ್ನಂ ಅಂಥ ಹಿರಿಯರನ್ನು ಹಾಗೂ ನಮ್ಮೊಡನಿರುವ ಅನೇಕ ಹಿರಿಕಿರಿ ಬರಹಗಾರರನ್ನು ಪರಿಚಯಿಸುವ ಮೂಲಕ ಪ್ರಕಾಶಕ ಸಂಸ್ಥೆಯೊಂದನ್ನು ಕೊಬ್ಬಿಸಿದ್ದೇ? ಸರ್ಕಾರದ ಬಗ್ಗೆ ಮೆದುಧೋರಣೆ ಹೊಂದಿರುವುದೇ? ಮನೆಯವರಿಂದಲೇ ಅಭಿನಂದನಾ ಗ್ರಂಥವನ್ನು ರೂಪಿಸಿಕೊಂಡಿರುವುದೇ– ಇವುಗಳಲ್ಲಿ ಪರಿಚಾರಿಕೆಯ ಗುಣ ಯಾವುದು?

ಅಂದಹಾಗೆ, ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಸಿದ್ದಲಿಂಗಯ್ಯನವರು ನಾಡಿಗರ ಶಿಷ್ಯರಲ್ಲೊಬ್ಬರು. ಗುರುಗಳಿಂದ ಹೊಂದಿದ ಪ್ರಯೋಜನದ ಬಗ್ಗೆ ಅವರು ಸಮಯ ಸಿಕ್ಕಾಗಲೆಲ್ಲ ನೆನಪಿಸಿಕೊಂಡು ಭಾವುಕರಾಗುತ್ತಾರೆ. ಅಂದರೆ, ಈ ಪರಿಚಾರಕ ಪ್ರಶಸ್ತಿ 'ಗುರುದಕ್ಷಿಣೆ' ರೂಪದಲ್ಲಿರಬಹುದೇ?

'ಕನ್ನಡ ಮತ್ತು ಬಂಗಾಳಿ ಸಾಹಿತ್ಯದ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ' ಎನ್ನುವುದು ನಾಡಿಗರಿಗೆ ಪ್ರಶಸ್ತಿ ನೀಡಲು ಪ್ರಾಧಿಕಾರ ಗುರ್ತಿಸಿರುವ ಕಾರಣ. ಹೌದು, ನಾಡಿಗರು ಬಂಗಾಳಿಯ ಕೆಲವು ಕವಿತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅಂದರೆ, ಪ್ರಾಧಿಕಾರದ ಶಬ್ದಕೋಶದಲ್ಲಿ ಅನುವಾದಕ್ಕೆ ಪರಿಚಾರಿಕೆ ಎನ್ನುವ ಅರ್ಥವಿದೆಯೆ? ಈ ಮೊದಲು ಹಿರಿಯ ವಿಮರ್ಶಕ ಕಿ.ರಂ.ನಾಗರಾಜ ಅವರಿಗೆ 'ಸಾಹಿತ್ಯ ಪರಿಚಾರಕ' ಪ್ರಶಸ್ತಿ ನೀಡಿದಾಗಲೂ ಆಯ್ಕೆಯ ಔಚಿತ್ಯದ ಪ್ರಶ್ನೆ ಉಂಟಾಗಿತ್ತು. ಆ ಪ್ರಶ್ನೆಗೆ ಕಿ.ರಂ. ಶಿಷ್ಯರು– 'ಕಿ.ರಂ. ಗರಡಿಯಲ್ಲಿ ನೂರಾರು ಮಂದಿ ಪಿಎಚ್.ಡಿ ಪಡೆದಿದ್ದಾರೆ. ಇದು ಸಾಹಿತ್ಯ ಪರಿಚಾರಿಕೆಯಲ್ಲವೆ?' ಎಂದು ಮರುಪ್ರಶ್ನಿಸಿದ್ದರು. ಇಂಥ ಸಮರ್ಥನೆಗಳಿಗೆ ಏನನ್ನುವುದು?

ರಾಜರತ್ನಂ ಪಂಕ್ತಿಯಲ್ಲಿ ನಡೆದ ವಿಡಂಬಾರಿಯಂಥ ಪರಿಚಾರಕರು ಸ್ವಂತ ಮನೆಯಿಲ್ಲದೆ ಮಗಳ ಮನೆಯಲ್ಲಿ ದಿನಕಳೆಯುತ್ತಿದ್ದಾರೆ. ಆದರೆ, ಬೆಂಗಳೂರು ಹಾಗೂ ವಿಶ್ವವಿದ್ಯಾಲಯ ಕೇಂದ್ರಿತ ಪ್ರಾಧಿಕಾರ 'ಸಾಹಿತ್ಯ ಪರಿಚಾರಿಕೆ'ಯ ಅರ್ಥವನ್ನೇ ತಿದ್ದಲು ಹೊರಟಂತಿದೆ.

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68